# 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ
## ಬೆಂಗಳೂರು ನಗರ

**ಸಿ.ಸಿ.ನಂ.17397/2018**

| | | | | |
|---|---|---|---|---|
| ಪಿರ್ಯಾದುದಾರರು ರಾಜ್ಯ ಪರ | ಃ | | | ಮೈಕೋ ಲೇಔಟ್ ಪೊಲೀಸ್ ಠಾಣೆ, ಬೆಂಗಳೂರು ನಗರ |
| | | ವಿರುದ್ಧ | | |
| ಆರೋಪಿಗಳು | | | ಆ-1 | ವಿನೋದ್ ಕುಮಾರ್ |
| | | | ಆ- 2 | ಅನುಸೂಯಮ್ಮ |

-- -- --

ಃ **ದೋಷಾರೋಪಣೆಃ**

ರಾಘವೇಂದ್ರ ವೈಜನಾಥ, 6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಬೆಂಗಳೂರು ನಗರ, ಆದ ನಾನು ಈ ಕಳಕಂಡಂತೆ ನಿಮ್ಮ ಮೇಲೆ ಈ ದೋಷಾರೋಪಣೆ ಹೊರಿಸುತ್ತೇನೆ. ಏನೆಂದರೆಃ-

ಮೊದಲನೆಯದಾಗಿ 1 ನೇ ಆರೋಪಿಯಾದ ನೀವು ದೋ.ಸಾ.1 ಶ್ರೀಮತಿ ವಿದ್ಯಾಶ್ರೀ ಬಿ.ಎಸ್. ಅವರನ್ನು ದಿನಾಂಕ 16.11.2016 ರಂದು ಬನ್ನೇರುಘಟ್ಟ ರಸ್ತೆಯಲ್ಲಿರುವ ಶಿಲ್ಪಕಲಾ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗಿದ್ದು, ಮದುವೆಯಾದ ನಂತರ ಆಕೆ ನಿಮ್ಮ ಜೊತೆ ಬಿಟಿಎಂ 2 ನೇ ಹಂತ, 16 ನೇ ಮುಖ್ಯರಸ್ತೆ, 9 ನೇ ಅಡ್ಡರಸ್ತೆ, ಮನೆ ನಂ.9 ರಲ್ಲಿ ವಾಸವಾಗಿ ಸಂಸಾರ ಮಾಡಿಕೊಂಡಿರುವಾಗ್ಗೆ 2 ನೇ ಆರೋಪಿಯಾದ ನೀವು ದೋ.ಸಾ.1 ರವರಿಗೆ ನಿಮ್ಮ ಮನೆಯವರು ಮದುವೆ ಸಮಯದಲ್ಲಿ ಬೆಳ್ಳಿತಟ್ಟೆ, ಬೆಳ್ಳಿ ಚೆಂಬು, 25 ಸಾವಿರದ ಮಂಚ ಮತ್ತು 5 ಲಕ್ಷ ನಗದು ಹಣವನ್ನು ವರದಕ್ಷಿಣೆಯಾಗಿ ನೀಡಿಲ್ಲವೆಂದು ಮನೆಯಲ್ಲಿ ವಿನಾಕಾರಣ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, 1 ನೇ ಆರೋಪಿಯಾದ ನೀವು ಪ್ರತಿದಿನ ಮದ್ಯಪಾನ ಮಾಡಿ ಮನೆಗೆ ಬಂದು ದೋ.ಸಾ.1 ರವರಿಗೆ ಕೈಗಳಿಂದ ಹೊಡೆದು, ನಿಮಗೆ ಅವರು ಬೇಡವೆಂದು ನೀವು

ಬೇರೆ ಹುಡುಗಿಯನ್ನು ನೋಡಿಕೊಂಡಿರುತ್ತೀರೆಂದು, ಹಿಂಸೆ ನೀಡಿ ಹೆಚ್ಚಿನ ವರದಕ್ಷಿಣೆ ಹಣ ತರುವಂತೆ ಗಲಾಟೆ ಮಾಡಿ ದೋ.ಸಾ.1 ರವರಿಗೆ ಕಿರುಕುಳ ನೀಡಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಕ್ರೌರ್ಯಕ್ಕೆ ಒಳಪಡಿಸಿ ಆ ಮೂಲಕ ಭಾ.ದಂ.ಸ ಕಲಂ 498(ಎ) ಸಹವಾಚಕ 34 ರಡಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಆರೋಪಿತರಾದ ನೀವುಗಳು ದೋ.ಸಾ.1 ರವರ ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಅವರಿಗೆ ಒತ್ತಾಯಿಸಿ ಆ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 4 ರಡಿಯಲ್ಲಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಕೊನೇಯದಾಗಿ 1 ನೇ ಆರೋಪಿಯಾದ ನೀವು ದೋ.ಸಾ.1 ರವರನ್ನು ಮದುವೆಯಾಗುವ ಸಂದರ್ಭದಲ್ಲಿ ಆ ಮದುವೆಗೆ ಸಂಬಂಧಪಟ್ಟಂತೆ ಆರೋಪಿತರಾದ ನೀವು ವರದಕ್ಷಿಣೆಯಾಗಿ 200 ಗ್ರಾಂ ಚಿನ್ನದ ಒಡವೆ, 1 ನೇ ಆರೋಪಿಗೆ ವಾಚ್ ಮತ್ತು ಬಟ್ಟೆಗಳನ್ನು ಪಡೆದುಕೊಂಡು ಆ ಮೂಲಕ ನೀವು ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 3 ರಡಿಯಲ್ಲಿ ಶಿಕ್ಷಾರ್ಹ ಆರೋಪ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ಧ ನನ್ನ ಮುಂದೆ ವಿಚರಾಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ರಾಘವೇಂದ್ರ ವೈಜನಾಥ)

ದಿನಾಂಕಃ 04.01.2023.

6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ,
ಬೆಂಗಳೂರು.

ಪ್ರ 1) ಮೇಲಿನ ದೋಷಾರೋಪಣೆ ಕುರಿತು ನಿಮಗೆ ಓದಿ ಹೇಳಿದ್ದು ತಿಳಿಯಿತೇ ?

ಉತ್ತರಃ

ಆ-1

ಆ-2

ಪ್ರ 2) ಈ ಬಗ್ಗೆ ನೀವು ಏನು ಹೇಳುತ್ತೀರಿ? ಈ ದೋಷಾರೋಪಣೆ ಒಪ್ಪಿಕೊಳ್ಳುತ್ತೀರಾ? ಇಲ್ಲವೇ ವಿಚಾರಣೆ ನಡೆಸಬೇಕು ಎನ್ನುತ್ತೀರಾ?

ಉತ್ತರಃ

ಆ-1

ಆ-2

(ಮೇಲಾಣಿಸಿದ ಆರೋಪಿಗಳಿಗೆ ನನ್ನ ಹಾಜರಾತಿಯಲ್ಲಿ ನಾನೇ ಖುದ್ದು ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟಿರುವ ಉತ್ತರಗಳನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

6 ನೇ ಅಪರ ಮುಖ್ಯ ಮಹಾನಗರ ದಂಡಾಧಿಕರಿಗಳು,
ಬೆಂಗಳೂರು ನಗರ.